

ಎಂ.ಎಫ್. ಹುಸೇನ್‌ರ 'ಗಾಂಧಿ – ಮ್ಯಾನ್ ಆಫ್ ಪೀಸ್' ಕಲಾಕೃತಿ

'ರಿಪಬ್ಲಿಕ್ ಆಫ್ ಆರ್ಟ್' ಎಂದು ಕರೆಯಲಾಗುವಂತೆ ನಮ್ಮ ಸಂವಿಧಾನವು ಸಚಿತ್ರಮಯವಾಗಿದೆ. ಅದೊಂದು ವಿಶಿಷ್ಟ ಆಕರ್ಷಕ ಕಲಾಇತಿಹಾಸದ ಪುಸ್ತಕವೂ ಹೌದು. ನಮ್ಮ ಚಿತ್ರ ಅಲಂಕೃತ ಹಸ್ತಪ್ರತಿಗಳ ಪರಂಪರೆಯಂತೆ ಸಂವಿಧಾನವು ಮೂಡಿಬಂದಿದೆ. ನಂದಲಾಲ್ ಬೋಸ್, ಪ್ರೇಮ್ ಬಿಹಾರಿ ನಾರಾಯಣ್ ಮತ್ತು ನಂದಲಾಲರ ಕುಟುಂಬದ ಮೂರು ತಲೆಮಾರಿನ ಸಂಕೇತದಂತೆ ಗೌರಿ ಬಂಜಾ (1907–1998), ಜಮುನಾ ಸೇನ್ (1912–2001), ನಿವೇದಿತಾ ಬೋಸ್, ಅಮಲಾ ಸರ್ಕಾರ್ (1922–2010), ಬನಿ ಪಟೇಲ್ (1928–2018), ಗೌರಿ ಬಂಜಾಳ ಮಗಳು, ನಂದಲಾಲರ ಮೊಮ್ಮಗಳು ಚಿತ್ರಿಸಿದ್ದಾರೆ. ಜೊತೆಗೆ ಸುಮಿತ್ರಾ ನಾರಾಯಣ್, ಪೆರುಮಾಳ್, ಕೃಪಾಲ್ ಸಿಂಗ್ ಅವರೂ ಸಂವಿಧಾನದ ಪುಟಗಳನ್ನು ಚಿತ್ರಿಸಿದ್ದಾರೆ. ಇಲ್ಲಿ ಭಾರತೀಯ ಸಂಸ್ಕೃತಿ ಮತ್ತು ಇತಿಹಾಸಗಳ ವಿವರಗಳನ್ನೂ ಚಿತ್ರಿಸಿದ್ದಾರೆ. ಮುಖ್ಯವಾಗಿ ಬಂಗಾರದ ಹಾಳೆ ಮತ್ತು ಮಣ್ಣಿನ ಬಣ್ಣಗಳನ್ನು ಬಳಸಿದ್ದಾರೆ. ಪುಟಗಳ ಒಟ್ಟು ಅಲಂಕಾರಕ್ಕೆ ಅಡ್ಡಿಯಾಗದಂತೆ ನಂದಲಾಲ ಬೋಸರ